(c) —

SCs	...	2,364
STs	...	71

Talukwise figures are as follows.—

		SCs	STs
1	Belgaum ...	430	...
2	Khanapur ...	164	...
3	Athani ...	250	...
4	Chikkodi ...	114	...
5	Bai ahongal ...	330	...
6	Soundatti ...	264	27
7	Ramdurg ...	178	34
8	Hukkeri ...	196	...
9	Raibag ...	237	4
10	Gokak ...	201	6
	Total ...	2,364	71

Calling Attention to a matter of urgent Public Importance

re : Hunger strike started by Sri Pampapathy, Member, Legislative Assembly.

SRI B. V. KAKKILAYA —Sir, I call the attention of the Chief Minister to the hunger strike started by Sri Pampapathy, Member, Legislative Assembly, to press for the reinstatement of 200 arrack vendors by the contractors in Bangalore city.

SRI R. GUNDURAO (Chief Minister). —Sir, I wish to make the following statement.

Every year right of retail vendig of Arrack is disposed off by public auction. For the excise year 1982-83 starting from 1st July 1982, the right has been confirmed in favour of Laxmi Enterprises, the highest bidders. Last year the contractors were Bhargavi and Company. The lease is valied for a period of one year.

2. The contractors enter into arrangement with ven ors to run individual shops on commission basis. Every year with starting of new lease contractors enter into arrangements with the vendors. Number of vendors depends upon the requirement of the contractor. This is a private arrangement between contractors and vendors and Government is not in picture.

This year about 80 vendors who were working with the previous contractor "Bhargavi and Company" filed a suit for injunction against discontinuing their arrangement. It is learnt that the present contractor Laxmi Enterprises also filed a suit of injunction against some vendors. The cases are pending before the Court and the matter is sub-judice.

4. It is also learnt that the Arrack Vendors who had been affected by the new arrangements had also approached the Labour Department in the matter. They had presented a memorandum which is under examination. The Labour Commissioner has also initiated discussions on this issue.

ಸ್ವಾಮಿ, ಪ್ರತಿ ವರ್ಷ ಒಬ್ಬೊಬ್ಬರು ತೆಗೆದುಕೊಳ್ಳುತ್ತಿದ್ದಾರೆ. ೧೯೮೧-೮೨ರಲ್ಲಿ ಲಕ್ಷ್ಮೀ ಎಂಟರ್ ಪ್ರೈಸಸ್‌ನವರು ತೆಗೆದುಕೊಂಡಿದ್ದಾರೆ. ಈ ವರ್ಷ ಭಾರ್ಗವಿ ಕಂಪನಿಯವರು ತೆಗೆದುಕೊಂಡಿದ್ದಾರೆ. ಪ್ರತಿ ವರ್ಷವೂ ಒಂದೊಂದು ಒಪ್ಪಂದ ಮಾಡಿಕೊಳ್ಳುತ್ತಾರೆ. ಕೆಲಸಗಾರರ ಜೊತೆ ಕೂಡ ಒಪ್ಪಂದ ಮಾಡಿಕೊಳ್ಳುತ್ತಾರೆ. ೮೦ ಜನ ವೆಂಡರ್ಸ್ ತೆಗೆಯಬೇಕೆಂದು ಭಾರ್ಗವಿ ಕಂಪನಿಯವರು ತೀರ್ಮಾನ ಕೈಗೊಂಡಾಗ, ಇದರ ವಿರುದ್ಧ ಕೋರ್ಟಿಗೆ ಹೋಗಿ, ಇಂಜಿಕ್ಷನ್ ಆರ್ಡರ್ ತೆಗೆದುಕೊಂಡು ಬಂದಿದ್ದಾರೆ. ಅದೇರೀತಿ ಕಂಟ್ರಾಕ್ಟ್‌ದಾರರು ಕೂಡ ಸಿವಿಲ್ ದಾವಾ ಹಾಕಿದ್ದಾರೆ. ಎರಡು ಕೂಡ ಕೋರ್ಟಿನಲ್ಲಿ ನಡೆಯುತ್ತಿದೆ. ಆದ್ದರಿಂದ ಇದರ ಬಗ್ಗೆ ನಾನೂ ಏನೂ ಹೇಳುವುದಕ್ಕೆ ಸಾಧ್ಯವಿಲ್ಲ. ಅಲ್ಲದೆ, ಕಾರ್ಮಿಕ ಮಂತ್ರಿಗಳು, ಕಮೀಷನರ್‌ರವರನ್ನು ಕರೆಸಿ, ಮೊದಲಿನಿಂದಲೂ ಕೆಲಸ ಮಾಡಿಕೊಂಡು ಯಾರು ಬಂದಿದ್ದಾರೆ, ಅವರನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಮಾತುಕತೆ ನಡೆಸಿದ್ದಾರೆ. ಈ ವಿಷಯವನ್ನು ಪರಸ್ಪರ ಮಾತುಕತೆಯಿಂದ ಬಗೆಹರಿಸಬೇಕೇ ಹೊರತು, ಸರ್ಕಾರದಿಂದ ಕಾನೂನು ಉಪಯೋಗಿಸಿ ಬಗೆಹರಿಸುವುದಕ್ಕಾಗುವುದಿಲ್ಲ. ಈ ವಿಷಯದಲ್ಲಿ ಮಾನ್ಯ ಸದಸ್ಯರಾದಂತಹ ಪಂಪಾಪತಿಯವರು ಉಪವಾಸ ಸತ್ಯಾಗ್ರಹ ಮಾಡುವುದು ಸರಿಯಲ್ಲ. ೮೦ ಜನರಿಗೆ ಕೆಲಸ ಕೊಟ್ಟಿಲ್ಲವೆಂದು ಸತ್ಯಾಗ್ರಹ ಮಾಡುವುದು ಸರಿಯಲ್ಲ. ಮಾತುಕತೆಯಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡೋಣ.

ಮಾನ್ಯ ಕಾರ್ಮಿಕ ಇಲಾಖಾ ಮಂತ್ರಿಗಳು ಆಗಲೇ ಕರೆಸಿ ಆ ಬಗ್ಗೆ ಮಾತನಾಡಿದ್ದಾರೆ ಪುನಃ ಬೇಕಾದರೆ ಕೆಲಸಗಾರರಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮ ಕೈಗೊಳ್ಳಬಹುದು. ನನಗೆ ತಿಳಿದ ಮಟ್ಟಿಗೆ ಕೆಲಸಗಾರರಿಗೆ ಏನು ಅನ್ಯಾಯವಾಗಿಲ್ಲ. ಅಲ್ಲಿರತಕ್ಕ ವೆಂಡರ್ಸ್ ಬಡವರೇನಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅವರ ಸಂಬಂಧಿಕರು ಇರುತ್ತಾರೆ.

ಶ್ರೀ ಆರ್. ಗುಂಡೂರಾವ್ —ಹೌದು. ಆದುದರಿಂದ, ಅಂಥ ವಿಷಯಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದು ತಮ್ಮ ಕರ್ತವ್ಯ. ನಾವು ಆ ವಿಚಾರದಲ್ಲಿ ಸಹಾನುಭೂತಿ ತೋರಿಸಿ ಯಾರಿಗೂ ಅನ್ಯಾಯವಾಗದಂತೆ ಮತ್ತು ಅವರಿಗೆ ಕೆಲಸ ಇರುವಂತೆ ಮಾಡಬೇಕೆಂಬುದೇ ನಮ್ಮ ಸರ್ಕಾರದ ಉದ್ದೇಶ. ನಾವು ಈ ರೀತಿ ಇರುವಾಗ, ಆ ಬಗ್ಗೆ ಒಂದು ತೀರ್ಮಾನ ಕೈಗೊಳ್ಳುವವರೆಗೆ ಅವಕಾಶ ಕೊಡದೆ ಸತ್ಯಾಗ್ರಹ ಮಾಡುತ್ತಾ ಹೋದರೆ ಪರಿಹಾರವನ್ನು ಹೇಗೆ ಕಂಡುಹಿಡಿಯುವುದಕ್ಕಾಗುತ್ತದೆ ? ಆದುದರಿಂದ, ದಯವಿಟ್ಟು ಪಂಪಾಪತಿಯವರಿಗೆ ಹೇಳಿ. ಅವರು ಕೂಡಲೇ ಉಪವಾಸವನ್ನು ನಿಲ್ಲಿಸಿ ಸದನಕ್ಕೆ ಬರಲಿ. ನಾವು ಮತ್ತೆ ಅವರನ್ನು ಕರೆಸಿ ಮಾತನಾಡುತ್ತೇವೆ. ಕೋರ್ಟಿನಲ್ಲಿರುವ ಕೇಸುಗಳನ್ನು ಬಿಟ್ಟರೆ ಬೇರೆ ಏನು ಇಲ್ಲ. ಪರಸ್ಪರ ಒಪ್ಪಿಕೊಂಡರೆ ಅದನ್ನು ಬೇಕಾದರೆ ಪಾಪಸ್ಸು ತೆಗೆದುಕೊಳ್ಳಬಹುದು. ಅವರಿಗೆ ಮತ್ತು ಕಾರ್ಮಿಕರಿಗೆ ಒಟ್ಟಿನಲ್ಲಿ ಒಳ್ಳೆಯದಾಗಬೇಕೆಂಬುದು ನಮ್ಮ ಉದ್ದೇಶ. ಯಾರು ಕೋರ್ಟ್‌ಆಂತರ ರೂಪಾಯಿಗಳನ್ನು ಕೊಟ್ಟಿರುತ್ತಾರೋ ಅವರಿಗೂ ಸಂಪಾದನೆ ಮಾಡಬೇಕೆಂಬ ಆಸೆ ಇರುತ್ತದೆ. ಆದುದರಿಂದ, ಸರ್ಕಾರ ಕೆಲಸ ಮಾಡುವ ಜನರಿಗೆ ಸಹಕಾರ ಕೊಡಬೇಕಾಗುತ್ತದೆ. ಇದನ್ನು ಸಹಕಾರ ಭಾವನೆಯಿಂದ ಇತ್ಯರ್ಥ ಮಾಡಿಕೊಳ್ಳಬೇಕೇ ಹೊರತು ಮುಷ್ಕರದಿಂದ ಬಗೆಹರಿಸುವುದಕ್ಕಾಗುವುದಿಲ್ಲ. ದಯವಿಟ್ಟು. ಮಾನ್ಯ ಪಂಪಾಪತಿಯವರು ತಮ್ಮ ಉಪವಾಸ ಸತ್ಯಾಗ್ರಹವನ್ನು ಕೈಬಿಡಲಿ, ಸರ್ಕಾರ ಈ ವಿಚಾರದಲ್ಲಿ ಸಹಾನುಭೂತಿಯಿಂದ ಇರುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದರಲ್ಲಿ ಬಂದೆರಡು ವಿಚಾರ ಗಳನ್ನು ಅವರ ಅವಗಾಹನೆಗೆ ತರಬಯಸುತ್ತೇನೆ. ಆ ಕಂಪನಿಯವರು ತಮ್ಮ ಹೆಸರುಗಳನ್ನು ಬದಲಾವಣೆ ಮಾಡಿ ಜುಲೈ ಒಂದರಿಂದ ಕೆಲಸಗಾರರನ್ನು ಅವರ ಇಷ್ಟಾನುಸಾರ ತೆಗೆಯುವುದಕ್ಕೆ ಮತ್ತು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಲುಕ್ಸಾನಾಗುತ್ತದೆ. ಭಾರ್ಗವಿ, ಸುಧಾ ಕಂಪನಿಯವರೆಲ್ಲರೂ ತಮ್ಮ ಕಂಪನಿಯ ಹೆಸರುಗಳನ್ನು ಬದಲಾಯಿಸಿ ಬಾಲಾಜಿ, ಎಂಟರ್‌ಪ್ರೈಸಸ್, ಲಕ್ಷ್ಮಿ ಎಂಟರ್‌ಪ್ರೈಸಸ್ ಎಂದು ಮಾಡಿಕೊಂಡಿದ್ದಾರೆ. ಜುಲೈ ಒಂದರಿಂದ ಯಾರ್ಯಾರನ್ನು ಇಟ್ಟುಕೊಳ್ಳಬೇಕೆಂದು ಮಾಡಿದಾಗ ಕೆಲವು ಮಂದಿ ವೆಂಡರ್ಸ್ ಅನ್ನು ಇಟ್ಟುಕೊಂಡಿದ್ದಾರೆ. ಅವರಿಗೆ ದಿವಸಕ್ಕೆ ೩–೪ ರೂಪಾಯಿಗಳ ಫೈನ್ ಹಾಕಿ ವಸೂಲ್ಮಾಡುತ್ತಾರೆ. ಅದು ಕಂಪನಿಯ ಲಿಕ್ಕಕ್ಕೆ ಹೋಗುತ್ತದೋ ಇಲ್ಲವೋ ಗೊತ್ತಿಲ್ಲ. ವೆಂಡರ್ಸ್ ಎಂದರೆ ಅವರು ಈ ದೇಶದ ಪ್ರಜೆಗಳು, ಅವರು ಕಮೀಷನ್ ಬೇಸಿಸ್ ಮೇಲೆ ಕೆಲಸ ಮಾಡುತ್ತಾರೆ. ಅಂಥವರ ಮೇಲೆ ಷಾರ್ಟ್ ಮೆಜರ್ ಬಂದರೆ ಇವರು ಜವಾಬ್ದಾರಿ ಹೊರಿಸುತ್ತಾರೆ. ಅದಕ್ಕೆ ಅವರು ಹೇಗೆ ಜವಾಬ್ದಾರರಾಗುತ್ತಾರೆ? ಆ ರೀತಿ ಏನಾದರೂ ಇದ್ದರೆ ಅದಕ್ಕೆ ತೂಕ ಮತ್ತು ಅಳತೆ ಇಲಾಖೆ ಇದೆ, ಅಲ್ಲಿಗೆ ದೂರು ಕೊಡಬೇಕು. ಅವರು ತನಿಖೆ ಮಾಡಿ ಫೈನ್ ಹಾಕಬೇಕು. ಅದನ್ನು ಬಿಟ್ಟು ಇವರೇ ಫೈನ್ ಹಾಕಿ ಹಣ ವಸೂಲ್ಮಾಡುತ್ತಾರೆ. ಆ ದಾಖಲಾತಿಗಳನ್ನೆಲ್ಲ ನಾನು ತಮ್ಮ ಕಡೆ ಕಳುಹಿಸಿ ಕೊಡುತ್ತೇನೆ. ಈ ರೀತಿಯಾಗಿ ವೆಂಡರ್ಸ್ ಅನ್ನು ನಡೆಸಿಕೊಳ್ಳುತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ಅವರು ಏನು ಮಾಡಿದರೆಂದರೆ, ನಮಗೆ ರಕ್ಷಣೆ ಕೊಡಬೇಕೆಂದು ಒಂದು ಸಂಘ ಮಾಡಿಕೊಂಡರು. ಆ ಮೂಲಕ ಈ ಸಮಸ್ಯೆಗಳನ್ನೆಲ್ಲ ಅವರು ಮಾಲೀಕರ ಗಮನಕ್ಕೆ ತರಲು ಪ್ರಯತ್ನ ಮಾಡಿದರು. ಸಂಘಕ್ಕೆ ಸೇರದವರು ಯಾರಾದರೂ ಇದ್ದರೆ ಅವರೆಲ್ಲ ರಾಜೀನಾಮೆ ಕೊಡಬೇಕು, ಇಲ್ಲದಿದ್ದರೆ. ಅಂಥ ವರನ್ನು ಕೆಲಸದಿಂದ ತೆಗೆಯುತ್ತೇವೆಂದು ಹೇಳಿದ್ದಾರೆ. ಸಂಘಕ್ಕೆ ಸೇರಲು ಸಹಿ ಹಾಕದಿದ್ದವರಿಗೆ ಕೆಲಸ ಇಲ್ಲವೆಂದು ಮಾಡಿದ್ದಾರೆ. ಕೆಲಸದಿಂದ ತೆಗೆದುಹಾಕಿರತಕ್ಕ ಕೆಲಸಗಾರರನ್ನು ಪುನರ್ ನೇಮಕ ಮಾಡಬೇಕಾದರೆ ಖಾಲಿ ಹಾಳೆಗೆ ಮತ್ತು ಖಾಲಿ ಚೆಕ್ಕಿಗೆ ಸಹಿ ಮಾಡಬೇಕೆಂದು ಒತ್ತಾಯ ಮಾಡಿ ದ್ದಾರೆ. ಆದಕ್ಕೆ ಯಾರು ಒಪ್ಪುಲಿಲ್ಲವೋ ಅಂಥ ೨೮೦ ಜನರು ಹೊರಗಡೆ ಇದ್ದಾರೆ. ಆ ವಿಚಾರವನ್ನು ಆ ಮೇಲೆ ಚರ್ಚೆ ಮಾಡಿಕೊಳ್ಳಿ. ಹೊದಲು ಅವರು ಹಿಂದೆ ಹೇಗೆ ಇದ್ದರೋ ಅದೇ ರೀತಿ ಮುಂದುವರಿಸಿ ಎಂದು ನಾವು ಅವರು ಕೂಡಿ ಹೇಳಿದೆವು, ಆದರೂ ಕೇಳಲಿಲ್ಲ ಅವರು ಏನು ಒಂದು ಕರಾರುಗಳನ್ನು ಹಾಕುತ್ತಾರೆ ಅದಕ್ಕೆ ಒಳಪಟ್ಟರೆ ಮಾತ್ರ ಆ ಕರಾರುಗಳಿಗೆ ಸಹಿ ಹಾಕಿಸಿಕೊಂಡು ಕೆಲಸ ಕೊಡುತ್ತಾರೆ, ಇಲ್ಲದಿದ್ದರೆ ಕೊಡುವುದಿಲ್ಲವೆಂದು ಹೇಳುತ್ತಾರೆ. ಈ ರೀತಿ ಯಾವ ಇಲಾಖೆಯಲ್ಲಾಗಲೀ ಅಥವಾ ಯಾವುದೇ ಕಾನೂನಿಗೆ ಒಳಪಡದೆ ಇರುವ ಜೀತದಾಳುಗಳಿಂದಲೂ ಕೂಡ ಈ ರೀತಿ ಬರೆಸಿಕೊಳ್ಳುವುದಿಲ್ಲ. ಆದುದರಿಂದ ತಾವು ಇದನ್ನು ಲಘುವಾಗಿ ತೆಗೆದುಕೊಳ್ಳದೆ ಅವರನ್ನು ಕರೆಸಿ ಹೇಳಬೇಕು. ಆಫೀಸ್ ಸೇರಿ ಕೊಳ್ಳಬೇಕಾದರೆ, ಕಾನೂನು ಪ್ರಕಾರ ೧೦ ಸಾವಿರ ರೂಪಾಯಿಗಳ ತೇವಣಿ ಇಡಬೇಕು. ಹಾಗೆ ಇಟ್ಟ ಹಣವನ್ನು ಅವರು ಬಿಟ್ಟು ಹೋಗುವಾಗ ಅಷ್ಟನ್ನು ಮುರಿದುಕೊಳ್ಳುತ್ತಾರೆ. ಅದಕ್ಕೆ ಕಾರಣಗಳನ್ನು ಈ ರೀತಿ ಷಾರ್ಟ್ ಮೆಜರ್ ಬಂತು. ಆ ರೀತಿ ಷಾರ್ಟ್ ಮೆಜರ್ ಆಯಿತು ಎಂದು ಹೇಳುತ್ತಾರೆ. ಈ ರೀತಿಯಾಗಿ ಇವತ್ತಿನ ದಿವಸ ಬೆಂಗಳೂರು ಸುತ್ತ ಮುತ್ತ ಇರತಕ್ಕ ಕಾರ್ಖಾನೆಗಳಲ್ಲಿ ನಡೆಯುತ್ತಿದೆ. ಹೀಗಾದರೆ ಕಾರ್ಮಿಕರಿಗೆ ಯಾವ ರೀತಿ ರಕ್ಷಣೆ ಸಿಗುತ್ತದೆ? ಆದ್ದರಿಂದ, ದಯವಿಟ್ಟು ಮ್ಯಾನೇಜ್ ಮೆಂಟಿನವರನ್ನು ಕರೆಸಿ ಇನ್ನು ಮುಂದಾದರೂ ಈ ರೀತಿ ಮಾಡದಂತೆ ತಿಳುವಳಿಕೆ ಹೇಳಬೇಕು. ಮತ್ತು ಕಾರ್ಮಿಕರಿಗೂ ಕೂಡ ನಿಮಗೆ ನಾವು ರಕ್ಷಣೆ ಕೊಡುತ್ತೇವೆ ಎಂದು ಹೇಳಬೇಕು. ಯಾರಿಗೂ ಕಾನೂನು ಮುರಿಯಬೇಕೆಂಬ ಇಷ್ಟ ಇರುವುದಿಲ್ಲ. ನ್ಯಾಯವಾದ ರೀತಿಯಲ್ಲಿ ಕರಾರು ಮಾಡಿಕೊಳ್ಳಲಿ. ತಾವೇ ಬೇಕಾದರೆ ಮಾಡಿಸಿಕೊಡಿ. ಕಾರ್ಯಕ್ರಮ ಹಾಕಿಕೊಂಡಿ. ಆದಕ್ಕೆ ಕೆಲಸಗಾರರು (ವೆಂಡರ್ಸ್) ಒಪ್ಪಿ ಕೊಳ್ಳುತ್ತಾರೆ. ಒಪ್ಪಿಕೊಳ್ಳಿ ಎಂದು ನಾವು ಹೇಳುತ್ತೇವೆ. ನಾವು ಹೇಳಿದ ಹಾಗೆಯೇ ಎಲ್ಲವೂ ನಡೆಯು ಬೇಕೆಂದರೆ ಬಹಳ ಕಷ್ಟವಾಗುತ್ತದೆ. ಇವತ್ತಿನ ದಿವಸ, ಅವರು ಇಡೀ ರಾಜ್ಯವನ್ನು ಗುತ್ತಿಗೆ ಮಾಡಿ ಕೊಂಡಿದ್ದಾರೆ. ಷಾಪ್‌ಗಳನ್ನು ಅವರೇ ತೆಗೆದುಕೊಂಡು ಸರ್ಕಾರಕ್ಕೆ ಹಣ ಕೊಡುತ್ತಾರೆ. ಸಣ್ಣ ಸಣ್ಣ ಕಂಟ್ರಾಕ್ಟರುಗಳು ಏನು ಇರುತ್ತಾರೆ ಅವರು ನಡೆಸಿ ಕೊಡುತ್ತಾರೆ. ಅವರೆಲ್ಲ ಸೇರಿ ಇವತ್ತು ರಾಜ್ಯದಲ್ಲಿ ಕಂಪನಿ ಮಾಡಿಕೊಂಡಿದ್ದಾರೆ. ಸರ್ಕಾರಕ್ಕೂ ಇದರಿಂದ ಲುಕ್ಸಾನಾಗುತ್ತದೆ. ಆಮೇಲೆ ಕೆಲಸಗಾರರ ಮೇಲೆ ಸವಾರಿ ಮಾಡುತ್ತೇವೆಂದರೆ ಅವರಿಗೆ ಕಾನೂನು ಇಲ್ಲವೆಂಬ ಪರಿಸ್ಥಿತಿ ಬರುತ್ತದೆ. ತಾವು ಈ ವಿಚಾರವನ್ನು

ಬಹಳ ಲಘುವಾಗಿ ತೆಗೆದುಕೊಂಡಿದ್ದೀರೆಂದು ಕಾಣುತ್ತದೆ. ತಾವು ಈ ಒಂದು ಸಮಸ್ಯೆಯನ್ನು ಖಂಡಿತ ಪರಿಹಾರ ಮಾಡುತ್ತೇವೆಂಬ ಭರವಸೆ ಕೊಡಬೇಕು. ಸರ್ಕಾರಕ್ಕೆ ಸಾಕಷ್ಟು ಅಧಿಕಾರ ಇದೆ. ಅಧಿಕಾರ ಇಲ್ಲ ವೆಂದರೆ ವ್ಯಸನವಾಗುತ್ತದೆ. ಅಧಿಕಾರ ಮತ್ತು ಬುದ್ಧಿ ಎರಡೂ ಇದೆ. ನಿಮ್ಮ ಅಧಿಕಾರ ಮತ್ತು ಅಧಿಕಾರಿಗಳನ್ನು ಉಪಯೋಗಿಸಿ ಕೆಲಸ ಮಾಡಬೇಕು. ನಿಮ್ಮ ಮಾತು ಮೀರಿ ಯಾರೂ ಹೋಗುವುದಿಲ್ಲ. ಒಟ್ಟಿನಲ್ಲಿ, ಆ ಕಾರ್ಮಿಕರಿಗೆ ರಕ್ಷಣೆ ನೀಡುವ ಭರವಸೆ ಕೊಡಬೇಕು, ಆ ಒಂದು ಭರವಸೆಯನ್ನು ಖಂಡಿತ ಕೊಡುತ್ತೀರೆಂಬ ನಂಬಿಕೆ ನನಗಿದೆ ಅವರನ್ನು ಕರೆಸಿ ಇದನ್ನು ತೀರ್ಮಾನ ಮಾಡಬೇಕು ಮತ್ತು ಇವತ್ತಿನ ದಿವಸ ಹೊರಗಡೆ ಇರತಕ್ಕ ೨೦೦ ಜನರನ್ನು ಪುನರ್ ನೇಮಕ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಈ ಬಗ್ಗೆ ತಾವು ಒಂದು ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಕಕ್ಕಿಲಾಯ ಅವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಇಂಥ ವಿಚಾರದಲ್ಲಿ ಉಪವಾಸ ಮಾಡತಕ್ಕದ್ದು ಸರಿಯಲ್ಲವೆಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಅದನ್ನು ನಾನು ಒಪ್ಪುತ್ತೇನೆ. ಇದು ಕಾರ್ಮಿಕರು ಮತ್ತು ಮಾಲೀಕರಿಗೆ ಸಂಬಂಧಪಟ್ಟ ವಿಚಾರವಾದ್ದರಿಂದ ವಿಶ್ವಾಸನದ ರೀತಿಯಲ್ಲಿ ಬಗೆಹರಿಯಬೇಕು. ಶ್ರೀ ಪಂಪಾಪತಿಯವರು ಉಪವಾಸ ಮಾಡುವ ಪರಿಸ್ಥಿತಿ ನಿರ್ಮಾಣವಾದ ಮೇಲೆ ಉಪವಾಸ ಮಾಡಿದ್ದಾರೆ. ಕಕ್ಕಿಲಾಯ ಅವರು ಹೇಳಿದ ಹಾಗೆ, ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟು ಅವರು ಉಪವಾಸ ಮಾಡುವುದನ್ನು ಬಿಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ, ನಾನು ಒಂದು ಸಲಹೆ ಕೊಡಬಯಸುವುದೇನೆಂದರೆ, ಹಿಂದೆ ಆರಾಕನ್ನು ತಾಲ್ಲೂಕುವಾರು ಯಾವ ರೀತಿ ಹರಾಜು ಮಾಡುತ್ತಿದ್ದರೋ ಆ ರೀತಿ ಮಾಡಿದರೆ ಎಷ್ಟೋ ಸಮಸ್ಯೆಗಳು ಬಗೆಹರಿಯುತ್ತವೆ.

ಹಿಂದೆ ಮುಂಬೈ ರಾಜ್ಯದಲ್ಲಿ ಸರ್ಕಾರದವರೇ ಇದನ್ನು ವಿತರಣೆ ಮಾಡತಕ್ಕ ವ್ಯವಸ್ಥೆ ಇತ್ತು, ರೀಟೈಲ್ ರೇಟ್ ಫಿಕ್ಸ್ ಮಾಡಿ ಮಾಡತಕ್ಕ ವ್ಯವಸ್ಥೆ ಮಾಡಿದರು. ಆ ರೀತಿ ನೀವೂ ಮಾಡಬಹುದು. ನಾನು ಏತಕ್ಕೆ ಈ ಸಲಹೆ ಮಾಡುತ್ತಿದ್ದೇನೆಂದರೆ, ಆರಾಕ್‌ನಲ್ಲಿ ಬೇರೆ ಬೇರೆ ಮಾದಕ ವಸ್ತುಗಳನ್ನು ಕೂಡಿಸಿ ರಾಜ್ಯದ ಜನರ ಆರೋಗ್ಯ ಹಾನಿಕಾರಕವಾಗುವ ರೀತಿಯಲ್ಲಿ ಆರಾಕ್ ತಯಾರು ಮಾಡುತ್ತಿದ್ದಾರೆ. ಅಡಲ್ಟ್ರೇಟೆಡ್, ಡೈಲೂಟೆಡ್ ಮಾಡಿ ಕೋಟ್ಯಾಂತರ ರೂಪಾಯಿಗಳ ಲಾಭ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ಕುಡಿಯತಕ್ಕ ಜನರು ಹೆಚ್ಚಾಗಿ ಬಡವರು ಮತ್ತು ಕಾರ್ಮಿಕರು ಅವರ ಆರೋಗ್ಯ ಹಾನಿಯಾಗುತ್ತಿದೆ. ಕೆಲಸ ಮಾಡತಕ್ಕ ವೈಂಡರ್ಸ್‌ಗೂ ತೊಂದರೆಯಾಗುತ್ತಿದೆ. ತಾವು ಒಕ್ಕಾಯ ಮಾಡಿದರೆ ಒಪ್ಪುತ್ತಾರೆ, ತಾವು ಒತ್ತಾಯ ಮಾಡಿ ಒಂದು ವ್ಯವಸ್ಥೆ ಮಾಡಬೇಕು. ಅಲ್ಲಿ ಕೆಲಸ ಮಾಡುವವರು ರೆಗ್ಯುಲರ್ ಎಂಪ್ಲಾಯೀಸ್ ಅಲ್ಲ. ಆದ್ದರಿಂದ ಇದನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡತಕ್ಕ ವಿಚಾರ ಮಾಡಿದರೆ ಸರ್ಕಾರಕ್ಕೂ ಲಾಭ, ಜನರ ಆರೋಗ್ಯಕ್ಕೂ ಅನುಕೂಲವಾಗುತ್ತದೆ. ಆದ್ದರಿಂದ ಈ ಬಗ್ಗೆ ಚಿಂತನೆ ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹರಾಜಿನ ಸಮಯದಲ್ಲಿ ಯಾರಿಗೆ ಹರಾಜು ನಿಲ್ಲುತ್ತದೆ ಎಂಬುದು ಹೇಳುವುದು ಕಷ್ಟ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ವಾಸ್ತವಾಂಶ ಏನೆಂದರೆ ಅಲ್ಲಿ ಶ್ರೀ ಗುಂಡೂರಾಯರು, ಶ್ರೀ ಲಕ್ಷ್ಮೀಸಾಗರ್, ಶ್ರೀ ವೀರಪ್ಪಮೊಯಿಲಿ ಇವರೇ ಇರುತ್ತಾರೆ. ಆದರೆ ಹೆಸರು ಮಾತ್ರ ಬೇರೆ ಇಟ್ಟುಕೊಂಡಿರುತ್ತಾರೆ. ಈ ವಿಷಯನ್ನು ಮರೆಯಬಾರದು. ಹರಾಜಿನ ಕಂಡೀಷನ್ ಹಾಕಿ ಅದರ ಪ್ರಕಾರ ಮಾರಾಟ ಮಾಡಬೇಕು, ಇಲ್ಲದೇ ಹೋದರೆ ಬೇರೆ ಕಂಟ್ರಾಕ್ಟರ್ ಹಿಡಿದು ಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲ. ಅವರ ಸಹಾಯ ಆಗತ್ಯವಾಗಿ ಬೇಕು. ಈ ರೀತಿ ಅವರನ್ನು ಕಷ್ಟಕ್ಕೆ ಈಡು ಮಾಡುವುದು ಅಮಾನವೀಯತೆಯಿಂದ ಕೂಡಿರತಕ್ಕದ್ದಾಗಿದೆ. ಸರ್ಕಾರದವರು ಮಾರಲ್ ಅಥಾರಿಟಿ ಮತ್ತು ಗುಡ್ ಆಫೀಸಸ್ ಉಪಯೋಗಿಸಿ ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳಬೇಕಾದ್ದು ಸರ್ಕಾರದ ಕರ್ತವ್ಯ. ಶ್ರೀ ಕಕ್ಕಿಲಾಯ ಅವರು ಶ್ರೀ ಪಂಪಾಪತಿಯವರ ಹತ್ತಿರ ಮಾತನಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟರೆ ನಾನು ಶ್ರೀ ಪಂಪಾಪತಿಯವರನ್ನು ಉಪವಾಸ ಮುಷ್ಕರವನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಆ ೨೫೦

ಜನರನ್ನು ಬಿಟ್ಟು ಹೆಂಡ ಸಾರಾಯಿ ಮಾರುವುದಕ್ಕಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಗಮನ ಹರಿಸ ಬೇಕು.

ಶ್ರೀ ಕೆ. ರಾಮಭಟ್,—ಸರ್ಕಾರ ಈ ವಿಷಯದಲ್ಲಿ ತನ್ನ ಅಸಹಾಯಕತೆಯನ್ನು ತೋರಿಸಿದೆ. ಈ ವೆಂಡರ್ಸ್ ನೌಕರರ ವ್ಯಾಪ್ತಿಯಲ್ಲಿ ಬರುತ್ತಾರೆಯೇ ? ಬರದೇ ಇದ್ದರೆ ಆ ವ್ಯಾಪ್ತಿಯಲ್ಲಿ ತರುವುದ ಕ್ಕಾಗುತ್ತದೆಯೇ ?

ಅಧ್ಯಕ್ಷರು.—ಅವರು ಕಮಿಷನ್ ತೆಗೆದುಕೊಳ್ಳುತ್ತಾರೆ ಅದರಲ್ಲಿ ಬೇರೆ ಬೇರೆ ತರಹ ಇದೆ. ತಾವು ಲಾಯರ್. ತಮಗೆ ಗೊತ್ತಲ್ಲ ಸಾರಾಯಿ ವ್ಯಾಪಾರ ?

ಶ್ರೀ ಕೆ. ರಾಮಭಟ್.—ನೌಕರ ಎಂಬ ಡೆಫನಿಷನ್‌ನಲ್ಲಿ ಅವರನ್ನು ತಂದು ಕಾನೂನಿನಲ್ಲಿ ಅವರಿಗೆ ರಕ್ಷಣೆ ಕೊಡುವ ಸಾಧ್ಯತೆ ಇದೆಯೇ ? ಆ ವ್ಯಾಪ್ತಿಯಲ್ಲಿ ಏತಕ್ಕೆ ತರಬಾರದು ? ಮತ್ತು ಮಾನ್ಯ ಸದಸ್ಯರಾದ ಪಂಪಾಪತಿಯವರು ಉಪವಾಸ ನಿಲ್ಲಿಸುವ ಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಈಗಾಗಲೇ ನಾನು ಹೇಳಿದ್ದೇನೆ, ಸರ್ಕಾರಕ್ಕೆ ನಿಸ್ಸಹಾಯಕತೆ ಏನೂ ಇಲ್ಲ. ಸರ್ಕಾರಕ್ಕೆ ಕೆಲವು ವ್ಯಾಪ್ತಿ ಮತ್ತು ಮಿತಿಗಳಿರುತ್ತವೆ. ಅದನ್ನು ಮೀರಿ ನಾವು ಮಾಡುವುದಕ್ಕಾಗುವುದಿಲ್ಲ. ೧೯೮೨-೮೩ ರ ಆಕ್ಷನ್ ಎಲ್ಲಾ ಆಗಿದೆ. ಮುಂದೆ ಮಾಡುವಾಗ ಮಾನ್ಯ ಬೊಮ್ಮಾಯಿಯವರು ಹೇಳಿದಂತೆ ಮಾಡುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ. ಹೊಸ ಸರ್ಕಾರ ಬಂದ ಮೇಲೆ ಆ ಬಗ್ಗೆ ಯೋಚನೆ ಮಾಡಲಿ. ಸದ್ಯಕ್ಕೆ ನಮ್ಮ ಮುಂದೆ ಆ ಪ್ರಶ್ನೆಯಿಲ್ಲ. ಮತ್ತೆ ಮಾನ್ಯ ಸದಸ್ಯರು ಸರ್ಕಾರವ ಪ್ರಭಾವ ಬೀರಿ ಮಾಲೀಕರನ್ನು ಕರೆಸಿ ವ್ಯವಸ್ಥೆ ಮಾಡಬೇಕೆಂದು ಹೇಳಿ ದ್ದಾರೆ. ನಾವು ಈಗಾಗಲೇ ಅದನ್ನು ಮಾಡುತ್ತಿದ್ದೇವೆ ಮಾನ್ಯ ಕಾರ್ಮಿಕ ಮಂತ್ರಿಯವರೂ ಸಹ ಮಾತನಾಡಿದ್ದಾರೆ. ನಾನೂ ಕರೆಸಿ ಮಾತನಾಡಿ ಪರಸ್ಪರ ಮಾತುಕತೆಯಿಂದ ಎಷ್ಟರ ಮಟ್ಟಿಗೆ ಸಹಾಯ ಮಾಡಬಹುದೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಸರ್ಕಾರದ ಉದ್ದೇಶವೂ ಅದೇ ಆಗಿದೆ. ಯಾರಿಗೂ ತೊಂದರೆಯಾಗಬಾರದು ಎಂಬ ಭಾವನೆ ಇದೆ. ಒಂದು ಸಾರಿ ಕರೆದು ಮಾತನಾಡಿದಾಗ ಅವರು ವೆಂಡರ್ಸ್ ಮೇಲೆ ಕೆಲವು ದೂರುಗಳನ್ನು ಹೇಳಿದರು. ಅದು ಸರಿಯೋ ತಪ್ಪೋ ಗೊತ್ತಿಲ್ಲ. ಮಾನ್ಯ ಕಕ್ಕಿಲಾಯ ಅವರು ಮಾತನಾಡಿ ಆಳತೆಯಲ್ಲಿ ಕಡಿಮೆ ಬರುತ್ತದೆ, ಆ ರೀತಿ ಬಂದಾಗ ವೆಂಡರ್ಸ್ ಮೇಲೆ ಶಾಕುಬರ್ತಾರೆ, ಮತ್ತೆ ಹೆಸರು ಬದಿಲಾಯಿಸಿಕೊಂಡು ಬರುತ್ತಾರೆ, ಎಂದು ಹೇಳಿದ್ದಾರೆ. ನಿಜವಾಗಿ ಯಾರೂ ನಕಲಿ ಮಾಡುತ್ತಾರೆ ಎಂದು ಹೇಳಿದರೆ ಕೇಸ್ ಹಾಕಬಹುದು. ಕಂಪನಿ ಹೆಸರು ಬದಲಾಯಿಸಿಕೊಂಡು ಆ ಕಂಪನಿ ಪರವಾಗಿ ಬಂದಿದ್ದೇನೆ ಎಂದು ಹೇಳುತ್ತಾರೆ ಎಂದು ಹೇಳಿದರು. ಆ ರೀತಿ ಹೇಳುವುದು ಅಷ್ಟು ಸುಲಭವಲ್ಲ. ಅದಕ್ಕೂ ಬಹಳ ಧೈರ್ಯ ಬೇಕಾಗುತ್ತದೆ. ಅಂಥದ್ದೇನಾದರೂ ನಡೆದಿದ್ದರೆ ಕ್ರಮ ತೆಗೆದುಕೊಳ್ಳೋಣ. ಈಗ ನಮ್ಮ ಮುಂದೆ ಇರುವ ವಿಚಾರ ಕೆಲಸಗಾರರ. ಕೆಲಸ ಕಳೆದುಕೊಂಡರೆ ನಿರ್ಗತಿಕರಾಗಬಹುದು. ಆ ಬಗ್ಗೆ ಕಂಪನಿ ಯವರ ಜೊತೆ ವ್ಯವಹರಿಸಿ ಅನುಕೂಲ ಮಾಡಿಕೊಡಬೇಕು ಎಂಬುದು. ಆ ಬಗ್ಗೆ ಕಾರ್ಮಿಕ ಮಂತ್ರಿ ಗಳು ಪ್ರಯತ್ನ ಮಾಡುತ್ತಿದ್ದಾರೆ. ನಾನೂ ಸಹ ಪ್ರಯತ್ನ ಮಾಡುತ್ತೇನೆ ಮಾಲೀಕರನ್ನು ಕರೆಸಿ ಮಾತನಾಡಿ ತೊಂದರೆಯಾಗದಂತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪಂಪಾಪತಿಯವರು ಉಪ ವಾಸ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಅವರು ಏನು ಉಪವಾಸ ಮಾಡುತ್ತಿದ್ದಾರೋ ಗೊತ್ತಿಲ್ಲ. ಇನ್ನು ೮-೧೦ ದಿವಸ ಅಧಿವೇಶನ ಇರುವುದು. ಆದ್ದರಿಂದ.....

ಶ್ರೀ ಎ. ಲಕ್ಷ್ಮೀಸಾಗರ್.—ತುಂಬಾ ಸುಸ್ತಾಗಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಪಂಪಾಪತಿಯವರ ತುಂಬಾ ದಪ್ಪಗಿದ್ದೇನೆ ತೂಕ ಕಡಿಮೆ ಮಾಡಿ ಕೊಳ್ಳಬೇಕು ಎಂದು ಹೇಳುತ್ತಿದ್ದರು. ಉಪವಾಸ ಮಾಡುವುದರಿಂದ ತೂಕ ಕಡಿಮೆಯಾಗುತ್ತದೆ, ಅದು ಒಳ್ಳೆಯದು. (ನಗು) ಅವರು ಉಪವಾಸ ನಿಲ್ಲಿಸಿ ಶಾಸನ ಸಭೆಗೆ ಬರುವಂತೆ ಹೇಳಿ. ಮಾಲೀಕರನ್ನು ಕರೆಸಿ ಮಾತನಾಡೋಣ. ನಾವು ನೀವು ಅವರಿಂದ ಎಲ್ಲಾ ಕಳಿತುಕೊಂಡು ಸಮಸ್ಯೆಯನ್ನು ಬಗೆಹರಿಸು ವುದಕ್ಕೆ ಪ್ರಯತ್ನ ಮಾಡೋಣ.